**ಎಸ್.ಸಿ.ಸಂಖ್ಯೆಃ10047/2025**

**ಪ್ರಾ.ಸಾ.ಸಂಖ್ಯೆಃ 14**

**ಚಾ.ಸಾ.ಸಂಖ್ಯೆಃ 8**

**ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿಃ ಮುಧೋಳ**

**ಎಸ್.ಸಿ.ಸಂಖ್ಯೆಃ 10047/2025**

| | |
|---|---|
| ಹೆಸರುಃ | ಶ್ರೀಕಾಂತ ಮಾಂಗ @ ಮೇತ್ರಿ |
| ತಂದೆಯ ಹೆಸರುಃ | ಕಲ್ಲೊಳ್ಳೆಪ್ಪ |
| ವಯಸ್ಸುಃ | **50** ವರ್ಷ |
| ಉದ್ಯೋಗಃ | ಚಿಲ್ಲರೆ ವ್ಯಾಪಾರ |
| ವಾಸಃ | ಮುಧೋಳ. |

**ಸಾಕ್ಷಿಯನ್ನು ದಿಃ 12.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ-**

**1.** ನನಗೆ ಆರೋಪಿತರ ಪರಿಚಯವಿದೆ. ಚಾಸಾ-**1** ನನ್ನ ತಂಗಿಯ ಮಗ. ಚಾಸಾ-**4** ನನ್ನ ತಂಗಿ. ನನಗೆ ಚಾಸಾ-**6, 7,9** ಹಾಗೂ ಉಳಿದ ಸಾಕ್ಷಿದಾರರ ಪರಿಚಯವಿದೆ. ಸುಮಾರು ಐದು ವರ್ಷಗಳ ಹಿಂದೆ ಚಾಸಾ-**1** ಹಾಗೂ ಆರೋಪಿ ಕಾಳಪ್ಪ ಯಾವುದೋ ವ್ಯವಹಾರದ ವಿಷಯವಾಗಿ ಜಗಳವಾಡಿದ್ದರು. ಚಾಸಾ-**1** ಈ ಜಗಳದ ಬಗ್ಗೆ ನನಗೆ ಹೇಳಿದ. ನನ್ನ ತಂಗಿ ಹಾಗೂ ಉಳಿದ ಹಿರಿಯರು ಅದನ್ನು ಬಗೆಹರಿಸೋಣ ಅಂತ ಹೇಳಿದ್ದರು.

**2.** ಮಧ್ಯಾಹ್ನ **2-30** ಗಂಟೆಗೆ ಆರೋಪಿತರೆಲ್ಲರೂ ಬಂದು ನನ್ನ ತಂಗಿ ಹಾಗೂ ತಂಗಿಯ ಮಗನಿಗೆ ಅವರ ಮನೆಯಲ್ಲಿ ಹೊಡೆಯುತ್ತಿದ್ದಾರೆ ಅಂತ ಯಾರೋ ಒಬ್ಬರು ನಾನು ಅಂಗಡಿಯಲ್ಲಿದ್ದಾಗ ಹೇಳಿದರು. ನಾನು ಮನೆಗೆ ಹೋಗಿ ನೋಡುವಷ್ಟರಲ್ಲಿ ಚಾಸಾ-**1** ರವರನ್ನು ಚಾಸಾ-**9** ರವರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು.

**3.** ಆಸ್ಪತ್ರೆಯಲ್ಲಿ ಚಾಸಾ-**1** ಹಾಗೂ **4** ಆರೋಪಿತರು ತಮಗೆ ಹಲ್ಲೆ ಮಾಡಿರುತ್ತಾರೆಂದು ಹೇಳಿದರು. ನಂತರ ನಾನು ಹಾಗೂ ಚಾಸಾ-**1** ಪೊಲೀಸ್ ಠಾಣೆಗೆ ಬಂದೆವು. ನಂತರ ಚಾಸಾ-**1** ದೂರು ನೀಡಿರುತ್ತಾರೆ.

**ಪಾಟಿಸವಾಲು: ಆರೋಪಿ ಪರ ವಕೀಲರಿಂದ:**

**(ವಕೀಲರ ವಿನಂತಿ ಮೇರೆಗೆ ಮಧ್ಯಾಹ್ನಕ್ಕೆ ಮುಂದೂಡಲಾಯಿತು. )**

**ಎಸ್.ಸಿ.ಸಂಖ್ಯೆಃ 10047/2025**
**ಪ್ರಾ.ಸಾ.ಸಂಖ್ಯೆಃ 14**
**ಚಾ.ಸಾ.ಸಂಖ್ಯೆಃ 8**

**(ಸಾಕ್ಷಿದಾರರನ್ನು ಪುನ: ಮಧ್ಯಾಹ್ನದ ಅವಧಿಯಲ್ಲಿ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)**

**<u>ಪಾಟಿಸವಾಲು: ಆರೋಪಿ ಪರ ವಕೀಲರಿಂದ:</u>**

ಚಾಸಾ-**1** ಹಾಗೂ **2** ನೇ ಆರೋಪಿತನ ನಡುವೆ ಆಗಿದೆ ಅಂತ ಹೇಳಿದ ಘಟನೆ ರಾತ್ರಿ **9** ರಿಂದ **9-30** ಗಂಟೆ ಸಮಯದಲ್ಲಿ ಆಗಿದೆ. ಆ ದಿವಸ ಚಾಸಾ-**1** ಶೇಖರ ನನ್ನನ್ನು ಭೇಟಿಯಾಗಿಲ್ಲ. ಚಾಸಾ-**4** ನನ್ನನ್ನು ಕರೆದುಕೊಂಡು ಊರ ಹಿರಿಯರನ್ನು ಬೇಟಿಯಾಗಲು ಬೆಳಗಿನ **8-9** ಗಂಟೆಯಿಂದ ಅಡ್ಡಾಡಿದೆವು. ನಾವು **1** ನೇ ಆರೋಪಿ ಗಣೇಶ ಮೇತ್ರಿ ಹಾಗೂ ಇತರ ಕೆಲವು ಹಿರಿಯರನ್ನು ಭೇಟಿ ಮಾಡಿದೆವು. ನಾವು **1** ನೇ ಆರೋಪಿಯನ್ನು ಭೇಟಿ ಮಾಡಿದಾಗ ಬೆಳಗಿನ **8** ರಿಂದ **9** ಗಂಟೆಯಾಗಿತ್ತು.

**2.** ಅವರು ಸಾಯಂಕಾಲ ಸೇರಿ ಮಾತನಾಡೋಣ ಅಂತ ಹೇಳಿದ್ದರು. ಚಾಸಾ-**1** ಹಿಂದಿನ ದಿವಸ **2** ನೇ ಆರೋಪಿಗೆ ಚಾಕುವಿನಿಂದ ಗಲ್ಲದ ಮೇಲೆ ಹಲ್ಲೆ ಮಾಡಿದ್ದ, ಅದರಿಂದ **2** ನೇ ಆರೋಪಿತನು ಕುಬಸದ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದ ಎಂದರೆ ನನಗೆ ಗೊತ್ತಿಲ್ಲ. ನಾನು ಹಾಗೂ ಚಾಸಾ-**4** ಚಾಸಾ-**1** ಇವನ ವಿರುದ್ದ **2** ನೇ ಆರೋಪಿ ದೂರು ಸಲ್ಲಿಸಲಾರದಂತೆ ಸಂಧಾನ ಮಾಡುವ ಸಲುವಾಗಿ ಹೋಗಿದ್ದೆವು ಎಂದರೆ ಸರಿಯಲ್ಲ. **1** ನೇ ಆರೋಪಿತನು ನಮಗೆ ಬೈದು ಕಳುಹಿಸಿದ್ದ ಎಂದರೆ ಸರಿಯಲ್ಲ.

**3.** ನಾನು ಚಾಸಾ-**1** ಇವರ ಮನೆಗೆ ಹೋದಾಗ ಚಾಸಾ-**6** ಹಾಗೂ ಅಕ್ಕ-ಪಕ್ಕದ ಮನೆಯವರು ಇದ್ದರು. ಚಾಸಾ-**9** ಚಾಸಾ-**1** ಹಾಗೂ **4** ರವರನ್ನು ಕರೆದುಕೊಂಡು ಹೋಗುವಾಗ ಬಸ್ಸಸ್ಟ್ಯಾಂಡನ ಹಿಂದಿನ ಭಾಗದಲ್ಲಿ ನಮ್ಮ ಏರಿಯಾದಲ್ಲಿ ಭೇಟಿಯಾದರು. ನಾನು ಆಸ್ಪತ್ರೆಗೆ ಸುಮಾರು ಅರ್ಧ ಗಂಟೆಯ ನಂತರ ಹೋದೆ. ಚಾಸಾ-**4** ಇವರಿಗೆ ರಕ್ತ ಗಾಯ ಆಗಿರಲಿಲ್ಲ. ಅವರ ಬಟ್ಟೆಗಳು ಹರಿದಿರಲಿಲ್ಲ.

**4.** ನನ್ನ ತಂಗಿ ಚಾಸಾ-**4** ಆಸ್ಪತ್ರೆಯಲ್ಲಿ **12-15** ದಿವಸ ಚಿಕಿತ್ಸೆ ಪಡೆದಿರುತ್ತಾರೆ. ಚಾಸಾ-**1** ರವರು ಒಂದು ವಾರಗಳ ಕಾಲ ಆಸ್ಪತ್ರೆಯಲ್ಲಿ ದಾಖಲಾಗಿದ್ದ, ಮತ್ತೇ ಹೋಗಿ ಬರುವುದು ಮಾಡುತ್ತಿದ್ದ. ಪೊಲೀಸ್ ಠಾಣೆಗೆ ನಾನು ಹಾಗೂ ಚಾಸಾ-**1** ಶೇಖರ ಹೋಗಿದ್ದೆವು. ರಾತ್ರಿ **11-00** ಗಂಟೆಯವರೆಗೆ ನಾವು ಪೊಲೀಸ್ ಠಾಣೆಯಲ್ಲಿದ್ದೆವು. ಚಾಸಾ-**9** ಚಾಸಾ-**1** ಹಾಗೂ **4**

**ಎಸ್.ಸಿ.ಸಂಖ್ಯೆಃ 10047/2025**
**ಪ್ರಾ.ಸಾ.ಸಂಖ್ಯೆಃ 14**
**ಚಾ.ಸಾ.ಸಂಖ್ಯೆಃ 8**

ರವರೊಂದಿಗೆ ಆಸ್ಪತ್ರೆಗೆ ಬಂದಿದ್ದು, ಅಲ್ಲಿಂದ ರಾತ್ರಿ **8-00** ಗಂಟೆಗೆ ನಮ್ಮೊಂದಿಗೆ ಪೊಲೀಸ್ ಠಾಣೆಗೆ ಬಂದರು.

**5.** ನಾನು ಮುಖ್ಯಸಾಕ್ಷಿಯಲ್ಲಿ ಹೇಳಿದಂತೆ ಆರೋಪಿತರು ಚಾಸಾ-**1** ಹಾಗೂ **4** ಇವರಿಗೆ ಹೊಡೆಯುತ್ತಿದ್ದಾರೆ ಅಂತ ಸುದ್ದಿ ತಿಳಿಯಿತು, ನಾನು ಸ್ಥಳಕ್ಕೆ ಹೋದೆ, ಆಗ ಅವರು ಆಸ್ಪತ್ರೆಗೆ ಹೋಗಿದ್ದರು ಅಂತ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ-**1** ಹಾಗೂ **4** ರವರಿಗೆ ಆರೋಪಿತರು ಹೊಡೆದಿರುತ್ತಾರೆಂದು ನನಗೆ ತಿಳಿಯಿತು ಅಂತ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-**1** ಹಾಗೂ **4** ಇವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**ಸಹಿ/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**